ಓದ್ದನು" ಆಸಕ್ತಿಯಿಂದ ವಿಚಾರಿಸಿಕೊಳ್ಳುತ್ತಿದ್ದಳು. "ಸ್ವಲ್ಪ ವೀಕು. ಗೌರಿಗೆ ಊಟಗೀಟ ಚೆನ್ನಾಗಿ ಕೊಡಿ." ಮೇಡಂಗಳು ಹೇಳಿಹೋಗಿದ್ದು ಆಕೆಗೆ ಏನೇನೂ ಸರಿಕಂಡಿರಲಿಲ್ಲ. ಮೃತ್ಯುನಾ ಬಿಟ್ಟು ಗೌರಿ ವಿಷ್ಯವನ್ನೆ ಅವರು ಮಾತಾಡುವುದು ಪಾರೋತಕ್ಕನಿಗಾಗದ ವಿಷಯವೇ. ಅಷ್ಟು ಪ್ರೀತಿ, ಕಕ್ಕುಲಾತಿ, ಅಭಿಮಾನಗಳು ತಮ್ಮನನ್ನು ಕಂಡರೆ! ಮೃತ್ಯುವಾದರೂ ಅಷ್ಟೇ! ಯಾರೊಂದಿಗೂ ಬೆರೆಯದವ, ಅಪ್ಪನೆದುರು ನಿಂತು ನಾಕು ಮಾತಾಡದವ! ಅಷ್ಟೋ ಇಷ್ಟೋ ಅವನು ಮಾತನಾಡುವುದು ತನ್ನಕ್ಕನ ಬಳಿಯಲ್ಲಿಯೇ! 'ಮೃತ್ಯು ಬದುಕಿದ್ದೇ ಪಾರೋತಕ್ಕನಿಂದ' ಎಂಬ ಮಾತೇ ಎಲ್ಲೆಲ್ಲೂ ಅವನಿಗೆ ಕೇಳಿಬರುವುದು. ಆ ಜನಜನಿತ ಮಾತ ಕೇಳಿಕೊಂಡೂ ಅಕ್ಕನನ್ನು ನೆಗ್ಲೇಟು ಮಾಡಲು ಅವನಿಗೆ ಆಗುವುದಿಲ್ಲ. ಅವನರಿವಿನಲ್ಲಿಯೂ ಅವಳ ಹಿರೀತನದ ಅರಿವು ಹಿರಿದಾಗಿಯೇ ಇದೆ. ಊರವರೆಲ್ಲ ಅವನನ್ನು ಕರಿಯ, ದೊಣಪ, ಧಾಂಡಿಗ, ಉಂಡಾಡಿಗುಂಡ, ಮೃತ್ಯು ಎಂದೆಲ್ಲಾ ಕರೆಯುವಾಗ ಪಾರೋತವ್ವ ಮಾತ್ರ ಅಕ್ಕರೆ ಉಕ್ಕಿಸಿ 'ಸ್ವಾಮಿ' ಎಂದೇ ಕರೆಯುವಳು. ಜನವೆಲ್ಲ ತಮ್ಮನನ್ನ 'ಮೃತ್ಯು' ಎನ್ನುವಾಗೆಲ್ಲ ಅವಳು ಬೇಜಾರಿಗೂ ಒಳಗಾಗುತ್ತಾಳೆ. ಯಾಕಾದರೂ ತಾನು ಆ ಹೆಸರಿಟ್ಟೆನೆಂದು.

ಎಸ್ಸೆಸ್ಸೆಲ್ಸಿಯಲ್ಲಿ ಮೃತ್ಯುನಾ ಹೆಂಡತಿ ಪಾಸಾಗಿ, ಮೃತ್ಯು ಫೇಲಾಗಿಬಿಟ್ಟಿದ್ದು ಆ ಊರಿನಾಗೆ ದೊಡ್ಡ ಸುದ್ದಿಯಾಗಿಬಿಟ್ಟಿತ್ತು. 'ಮೃತ್ಯು ನಿನ್ನೆಂಡ್ತಿ ಪಾಸಂತಲ್ಲೋ'. ಮೃತ್ಯುಗೆ ಕೇಳಿ ಕೇಳಿ ಸಾಕಾಗಿಹೋಗಿತ್ತು. ಸೀದ ಕಡ್ಡಿಯ ಹಾಗಿರುವ ಗೌರಿಯಲ್ಲಿ ಅವನಿಗೆಂದೂ ಆದರದ ನೋಟವೇ ಇಲ್ಲ. ಹಟ್ಟಿಯಲ್ಲಾಗಲೀ, ಶಾಲೆಯಲ್ಲಾಗಲಿ 'ಇವಳ್ಯಾವಳು ಇವಳು ಯಃಕಶ್ಚಿತ್ ಜೀವಿ' ಎಂದು ಕೊನೆಗಣ್ಣೂ ಬೀರದವ. ಇದೀಗ ಮಾತ್ಸರ್ಯದ ನೋಟವ ಗೌರಿಯತ್ತ ಹರಿಸಿದ್ದ. ಅವನ ನೋವು ಅಕ್ಕನೆದುರು ಕಣ್ಣೀರಾಗಿ ಹರಿದು ನಿಂತಿತ್ತು. ಪಾರೋತಕ್ಕ ಮಗಳ ಓದನ್ನು ಅಲ್ಲಿಗೇ ನಿಲ್ಲಿಸಿಬಿಟ್ಟಳು. ಯಾರ ಮಾತುಗಳೂ ಅವಳ ಕಿವಿ ತಾಗಲಿಲ್ಲ. ಒಂದೊರುಷ ಊರುಗೀರು ಸುತ್ತುಗಂಡು ಅದು ಹೇಗೋ ಎಸ್ಸೆಸ್ಸೆಲ್ಸಿ ಪಾಸು ಮಾಡಿದ್ದ ಮೃತ್ಯು ಪಿಯುಸಿಗೆ ಸೇರಿದಾಗಲೇ ಪಾರೋತಕ್ಕ ಹಗುರಾದದ್ದು. ಪಾರೋತಕ್ಕ ಏನು ಹರಕೆ ಹೊತ್ತರೂ ಅವನಿಗೆ ಪಿಯುಸಿ ದಾಟಲಾಗಲೇ ಇಲ್ಲ.

ಮಾಲಿಂಗಪ್ಪ ಮಗನ ಭವಿಷ್ಯವ ಕಣ್ಣಲ್ಲಿ ಕಂಡವರಾಗಿ ಇಲ್ಲೇ ಇದ್ದು ಹೊಲ, ಗದ್ದೆಗಳನ್ನು ಮಾಡಿಸುತ್ತಾನೆಂದು ನಿರ್ಧರಿಸಿಕೊಂಡಿದ್ದರು. ಕಣ್ಣುಮುಚ್ಚುವ ಮೊದಲು ಮಗನ ಲಗ್ನವ ಮಾಡಿಬಿಡಲೂ ತೀರ್ಮಾನಿಸಿದ್ದರು. ಮೃತ್ಯುನಾ ಬದುಕು ಉಳಿಸಿಕೊಟ್ಟು, ಅವನಲ್ಲಿ ಅಪಾರ ಪ್ರೀತಿ ಅಭಿಮಾನಗಳ ಹರಿಸುವ ಪಾರೋತಿ, ಅವಳ ಮಗಳು ಗೌರಿಯ ಮುಖಗಳೇ ಅವರ ಕಣ್ಣಮುಂದೆ ಮೂಡಿ ನಿಂತದ್ದು. ಊರೆಲ್ಲ ಆದಿಯಿಂದಲೂ ಗೌರಿಯನ್ನು 'ಮೃತ್ಯು ಹೆಂಡತಿ' ಎಂದೇ ಕರೆಯುತ್ತಾ ಬಂದಿದೆ. ಈ ಲಗ್ನದಿಂದಾಗಿ ಎಲ್ಲರೂ ಪರಸ್ಪರ ಆಸರೆಗಳೊಳಗೆ ಬದುಕು ಮುಂದುವರೆಸಬಹುದು. ಸಿಟಿ ಸೇರಿಕೊಂಡು ಬಿಟ್ಟ ಮೊದಲೆರಡು ಮಕ್ಕಳ ನೆಚ್ಚಿಕೊಳ್ಳುವಂತಿಲ್ಲ. ಮೃತ್ಯುವಿಗೆ ಪಾರೋತಕ್ಕನಷ್ಟು ಪ್ರೀತಿ ಹಂಚಿದ ಜೀವ ಮತ್ತೊಂದಿಲ್ಲ. ಅವಳು, ಅವಳ ಮಗಳಿಗಾದರೂ ಆಸರೆ ಬೇಕಲ್ಲವೆ? ಮಗಳ ಮುಂದೆ ಮಗನ ಲಗ್ನದ ವಿಚಾರ ಮಾತನಾಡಿದರು. ಪಾರೋತಕ್ಕ ಮೋಡಗಳ ನಡುವೆ ತೇಲಾಡುವಂತಾದಳು. ಜನ ಈಡುಜೋಡಿಲ್ಲದ ಜೊತೆಗಾಗಿ ನಗೆಸಾರ ಮಾಡಿದರು. ಮೃತ್ಯುವಾದರೋ ಮಾಂಸ ಪರ್ವತ, ಗೌರಿಯಾದರೋ ಸೀದ ಕಡ್ಡಿ! ತಕ್ಕಂಗೂ ಮುಕ್ಕಂಗೂ ಜೋಡಿ ಚೆನ್ನಾಗಿಯೇ ಇದೆಯೆಂದು ಹಿಂದೆ ಮಾತನಾಡಿಕೊಂಡರು. ಜೋಡಿ ಕಟ್ಟಿದವರೂ ಜನವೇ. ಆಡಿಕೊಂಡು ನಕ್ಕವರೂ ಜನವೇ. ತೇಲಾಡುತ್ತಿದ್ದ ಪಾರೋತಕ್ಕನನ್ನು ಗೌರಿ ಕೆಳಗಿಳಿಸಿಕೊಂಡು ನಾಲ್ಕು ಮಾತನಾಡಲು ಹತ್ತಾರು ಬಾರಿ ಯತ್ನಿಸಿದ್ದಳು. ಅವ್ವ ಕೆಳಗೆ ಸಿಗದಷ್ಟು ಎತ್ತರದಲ್ಲಿದ್ದಳು.

ಮೃತ್ಯುವಿನ ನೋಟದ ಅರ್ಥ ಗೌರಿಗೆ ದಿನದಿನವೂ ಆಗುವಂಥದ್ದೆ. ಒಂದು ಜೀವವಿದು ಎಂಬೊಂದು ಸಣ್ಣ ಕರುಣೆ, ಮರುಕಗಳೂ ಅವನಲ್ಲಿ ಕಾಣಲು ಸಾಧ್ಯವಿರಲಿಲ್ಲ. ಗೌರಿ ಮನೆಯಲ್ಲಿದ್ದಾಳೆ ಎಂಬೊಂದು